StudentBounty.com

0102/0

**First Semester of Three Year LL.B./Third Semester of Five Year B.A.LL.B./B.B.A.LL.B. Examination, December 2013**
**INDIAN CONSTITUTIONAL LAW (Course – II)**

Duration : 3 Hours | Max. Marks : 100

**Instructions** :
1. Answer all **5** Questions.
2. **One** essay type and **one** short note question or problem from **each unit** have to be attempted, which is referred as part (a) and (b) in all the units.
3. Figures to the right indicate marks.
4. Answers should be written **either** in English or Kannada **completely**.

**UNIT – I**

Q. No. 1. (a) Explain "State" as provided under Art. 12 of the Constitution with reference to decided cases. Marks : 15

ತೀರ್ಮಾನಿತ ಪ್ರಕರಣಗಳ ಉಲ್ಲೇಖದೊಂದಿಗೆ ಸಂವಿಧಾನದ ಅನುಚ್ಛೇದ 12ರಲ್ಲಿ ಹೇಳಿರುವಂತೆ ''ರಾಜ್ಯ''ವನ್ನು ವಿವರಿಸಿರಿ.

OR/ಅಥವಾ

Explain the principles of equality as laid down under Art. 14 of the Indian Constitution.

ಭಾರತದ ಸಂವಿಧಾನದ ಅನುಚ್ಛೇದ 14ರಲ್ಲಿ ಹೇಳಿರುವ ಸಮಾನತೆಯ ತತ್ವಗಳನ್ನು ಕುರಿತು ವಿವರಿಸಿ.

(b) The passport authorities have refused to issue the passport to "A", a citizen of India, to go abroad. Can the Authorities be compelled to issue the passport ? Decide. Marks : 5

ಪಾಸ್‌ಪೋರ್ಟ್ ಅಧಿಕಾರಿಗಳು ಭಾರತೀಯ ನಾಗರಿಕ "A" ಎಂಬುವನಿಗೆ ವಿದೇಶ ಪ್ರವಾಸ ಕೈಗೊಳ್ಳಲು ಅವಶ್ಯಕ ಬೇಕಾಗಿರುವ ಪಾಸ್‌ಪೋರ್ಟ್ ನೀಡಲು ನಿರಾಕರಿಸುತ್ತಾರೆ. ಅವನು ಪಾಸ್‌ಪೋರ್ಟ್ ಪಡೆಯಲು ಅಧಿಕಾರಿಗಳನ್ನು ಒತ್ತಾಯಿಸಬಹುದೇ ? ನಿರ್ಧರಿಸಿ.

OR/ಅಥವಾ

The State Government issued an order under Art. 15(4) of the constitution reserving 68% of seats to backward and more backward classes and 32% seats made available to the merit pool in the Medical and Engineering Colleges. The validity of the order was challenged by a student who had secured more marks than those admitted under the order. Decide.

ಸಂವಿಧಾನದ ಅನುಚ್ಛೇದ 15(4) ರ ಅಡಿಯಲ್ಲಿ ವೈದ್ಯಕೀಯ ಮತ್ತು ತಾಂತ್ರಿಕ ಮಹಾವಿದ್ಯಾಲಯಗಳಲ್ಲಿ ಶೇಕಡಾ 68% ಸ್ಥಳಗಳನ್ನು ಹಿಂದುಳಿದ ಜಾತಿ ಮತ್ತು ಅತೀ ಹಿಂದುಳಿದ ಜಾತಿಗಳಿಗೆ ಮೀಸಲಾತಿ ನೀಡಿ, ಉಳಿದ 32% ಸ್ಥಳಗಳನ್ನು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ದೊರಕುವಂತೆ ಸರಕಾರ ಆಜ್ಞೆ ಹೊರಡಿಸಿತು.

ಆಜ್ಞೆಯ ಸಿಂಧುತ್ವವನ್ನು ಒಬ್ಬ ಪ್ರತಿಭಾವಂತ ವಿದ್ಯಾರ್ಥಿಯು ಪ್ರಶ್ನಿಸಿದನು. ನಿರ್ಧರಿಸಿ.

P.T.O.

www.StudentBounty.com

StudentBounty.com

## UNIT – II

Q. No. 2. (a) Discuss the relative importance of the Fundamental Rights and Directive Principles of State Policy with the help of decided cases. Marks : 15

ಪ್ರಮುಖ ಪ್ರಕರಣಗಳ ಸಹಾಯದಿಂದ ಮೂಲಭೂತ ಹಕ್ಕುಗಳು ಮತ್ತು ರಾಜ್ಯನೀತಿ ನಿರ್ದೇಶಕ ತತ್ವಗಳೊಳಗಿನ ಸಾಪೇಕ್ಷ ಪ್ರಾಮುಖ್ಯತೆಯನ್ನು ಚರ್ಚಿಸಿರಿ.

OR/**ಅಥವಾ**

Discuss briefly the constitutional Position of the President of India.

ಭಾರತದ ರಾಷ್ಟ್ರಪತಿಯ ಸಂವಿಧಾನಾತ್ಮಕ ಸ್ಥಾನಮಾನವನ್ನು ಕುರಿತು ಚರ್ಚಿಸಿರಿ.

(b) Write a note on the Constitution and composition of Union Parliament. Marks : 5

ಕೇಂದ್ರ ಸಂಸತ್ತಿನ ರಚನೆ ಮತ್ತು ಸದಸ್ಯತ್ವವನ್ನು ಕುರಿತು ಟಿಪ್ಪಣಿಯೊಂದನ್ನು ಬರೆಯಿರಿ.

OR/**ಅಥವಾ**

Write a note on Parliamentary Privileges.

ಸಂಸದೀಯ ವಿಶೇಷಾಧಿಕಾರಗಳು (ಉನ್ಮುಕ್ತಿಗಳು) ಕುರಿತು ಟಿಪ್ಪಣಿಯೊಂದನ್ನು ಬರೆಯಿರಿ.

## UNIT – III

Q. No. 3. (a) Examine the nature and extent of the Appellate Jurisdiction of the Supreme Court of India. Marks : 15

ಭಾರತದ ಸರ್ವೋಚ್ಚ ನ್ಯಾಯಾಲಯದ ಮೇಲ್ಮನವಿ ನ್ಯಾಯಾಧಿಕಾರದ ಸ್ವರೂಪ ಮತ್ತು ವ್ಯಾಪ್ತಿಯನ್ನು ಕುರಿತು ಪರಿಶೀಲಿಸಿ.

OR/**ಅಥವಾ**

Discuss the principles which regulate the exercise of writ Jurisdiction by the High Courts.

ಉಚ್ಚ ನ್ಯಾಯಾಲಯಗಳ ಪರಮಾದೇಶ ಅಧಿಕಾರ ವ್ಯಾಪ್ತಿಯ ಚಲಾವಣೆಯನ್ನು ನಿಯಮಿಸುವ ತತ್ವಗಳನ್ನು ಚರ್ಚಿಸಿರಿ.

(b) Write note on Public Interest Litigation. Marks : 5

ಸಾರ್ವಜನಿಕ ಹಿತಾಸಕ್ತಿ ವ್ಯಾಜ್ಯಗಳ ಕುರಿತು ಟಿಪ್ಪಣಿಯೊಂದನ್ನು ಬರೆಯಿರಿ.

OR/**ಅಥವಾ**

Write note on 'Advisory Jurisdiction of the Supreme Court'.

'ಸರ್ವೋಚ್ಚ ನ್ಯಾಯಾಲಯದ ಸಲಹಾ ನ್ಯಾಯಾಧಿಕಾರ' ಕುರಿತು ಟಿಪ್ಪಣಿಯೊಂದನ್ನು ಬರೆಯಿರಿ.

www.StudentBounty.com

StudentBounty.com

## UNIT – IV

Q. No. 4. (a) What do you mean by 'Inter-State Trade and Commerce' ? Discuss the constitutional provisions that regulate Inter-State Trade and Commerce in India. Marks : 15

'ಅಂತರರಾಜ್ಯ ವ್ಯಾಪಾರ ಮತ್ತು ವಾಣಿಜ್ಯ' ಎಂದರೇನು ? ಭಾರತದಲ್ಲಿ ಅಂತರರಾಜ್ಯ ವ್ಯಾಪಾರ ಮತ್ತು ವಾಣಿಜ್ಯವನ್ನು ನಿಯಂತ್ರಿಸುವ ಸಂವಿಧಾನಾತ್ಮಕ ಉಪಬಂಧಗಳನ್ನು ಕುರಿತು ಚರ್ಚಿಸಿ.

OR/**ಅಥವಾ**

Examine the limitations on the power of the parliament to amend the Constitution under Art. 368. Refer to decided cases.

368ನೇ ಅನುಚ್ಛೇದದ ಅಡಿಯಲ್ಲಿ ಸಂವಿಧಾನವನ್ನು ತಿದ್ದುಪಡಿಮಾಡುವ ಸಂಸತ್ತಿನ ಅಧಿಕಾರವು ಯಾವ ಇತಿ–ಮಿತಿಗಳಿಗೆ (ನಿರ್ಬಂಧಗಳಿಗೆ) ಒಳಪಟ್ಟಿದೆ ಎಂಬುದನ್ನು ತೀರ್ಮಾನಿತ ಪ್ರಕರಣಗಳ ಸಹಾಯದಿಂದ ಪರಿಶೀಲಿಸಿ.

(b) The Parliament in the exercise of its constituent power amended the constitution and deleted the right to property from Part – III. 'x' a citizen challenged the validity of the amendment on the ground that it affected the basic structure of the constitution. Will he succeed ? Marks : 5

ಸಂಸತ್ ತನ್ನ ಪ್ರತಿನಿಧಿ ಆಯ್ಕೆಯ ಮೂಲಭೂತ ಅಧಿಕಾರದ ವ್ಯಾಪ್ತಿಯಲ್ಲಿ ಸಂವಿಧಾನವನ್ನು ತಿದ್ದುಪಡಿ ಮಾಡಿ ಆಸ್ತಿ ಹಕ್ಕನ್ನು ಭಾಗ – IIIರಿಂದ ತೆಗೆದು ಹಾಕಿದೆ. 'x' ಎಂಬ ನಾಗರಿಕನು ಸಂವಿಧಾನದ ಈ ತಿದ್ದಪಡಿಯು ಸಂವಿಧಾನದ ಮೂಲ ಸ್ವರೂಪಕ್ಕೆ ಧಕ್ಕೆ ತಂದಿದೆ ಎಂದು ಪ್ರಶ್ನಿಸುತ್ತಾನೆ. ಅವನು ಗೆಲ್ಲುವನೇ ?

OR/**ಅಥವಾ**

The Government of India levies an import duty on goods imported by a state for Governmental use. This is challenged by the State on the ground that the property of the State is immune from Central Taxation. Decide.

ಸರಕಾರಿ ಉಪಯೋಗಕ್ಕಾಗಿ ರಾಜ್ಯವು ಆಯಾತ ಮಾಡಿಕೊಂಡ ಸರಕುಗಳ ಮೇಲೆ ಭಾರತ ಸರಕಾರವು ಆಯಾತ ಕರವನ್ನು ವಿಧಿಸಿದೆ. ರಾಜ್ಯದ ಆಸ್ತಿ/ಸಂಪತ್ತು ಕೇಂದ್ರದ ಕರಾಕರಣೆಯಿಂದ ವಿಮುಕ್ತವಾಗಿದೆಯೆಂಬ ತಳಹದಿಯ ಮೇಲೆ ಆ ರಾಜ್ಯವು ಇದನ್ನು ಅಂದರೆ ಕರಾಕರಣೆಯನ್ನು ಪ್ರಶ್ನಿಸಿದೆ. ನಿರ್ಧರಿಸಿ.

www.StudentBounty.com

## UNIT – V

Q. No. 5. (a) Examine the powers of the President of India to declare a State Emergency and state its effect on Federalism and Fundamental Rights. Marks :15

ರಾಜ್ಯ ತುರ್ತು ಪರಿಸ್ಥಿತಿಯನ್ನು ಘೋಷಿಸಲು ಭಾರತದ ರಾಷ್ಟ್ರಪತಿಗೆ ಇರಬಹುದಾದ ಅಧಿಕಾರದ ವ್ಯಾಪ್ತಿಯನ್ನು ಮತ್ತು ಇದರಿಂದ ಸಂಯುಕ್ತಾತ್ಮಕ ವ್ಯವಸ್ಥೆ ಮತ್ತು ಮೂಲಭೂತ ಹಕ್ಕುಗಳ ಮೇಲಾಗುವ ಪರಿಣಾಮಗಳನ್ನು ಪರಿಶೀಲಿಸಿ.

OR/**ಅಥವಾ**

Explain the extent of Government liability for the tortious acts of its servants under the Constitution. Refer to decided cases.

ಸಂವಿಧಾನದ ಅಡಿಯಲ್ಲಿ ಸರಕಾರಿ ನೌಕರರ ಅಪಕೃತ್ಯಗಳಿಗೆ ಸಂಬಂಧಿಸಿದಂತೆ ಸರಕಾರದ ಹೊಣೆಗಾರಿಕೆಯ ವ್ಯಾಪ್ತಿಯನ್ನು ವಿವರಿಸಿ. ನಿರ್ಣಯಿಸಿದ ಪ್ರಕರಣಗಳನ್ನು ಉಲ್ಲೇಖಿಸಿರಿ.

(b) 'A' a Central Government employee was removed from the service without conducting an enquiry. He was removed from the service on the ground that he used some criminal force against his superior authority. Is removal valid ? Marks : 5

'A' ಎಂಬ ಕೇಂದ್ರ ಸರಕಾರಿ ನೌಕರನನ್ನು ಯಾವುದೇ ವಿಚಾರಣೆ ಮಾಡದೆ ಕೆಲಸದಿಂದ ತೆಗೆದುಹಾಕಲಾಯಿತು. ತನ್ನ ಹಿರಿಯ ಅಧಿಕಾರಿಯ ಮೇಲೆ ಅಪರಾಧಿಕ ಬಲಪ್ರಯೋಗ ಮಾಡಿದ ಪ್ರಯುಕ್ತ ಅವನನ್ನು ಕೆಲಸದಿಂದ ತೆಗೆಯಲು ಮುಖ್ಯ ಕಾರಣವಾಗಿತ್ತು. ಅವನನ್ನು ಕೆಲಸದಿಂದ ತೆಗೆದುಹಾಕಿದ್ದು ಕಾನೂನುಬದ್ಧವೇ ?

OR/**ಅಥವಾ**

A Truck belonging to the Indian Army met with an accident resulting in the death of 'x'. x's wife claims compensation - by filing a suit against the Government. Can she succeed ? Decide.

ಭಾರತೀಯ ಸೈನ್ಯಕ್ಕೆ ಸೇರಿದ ಸಾರಿಗೆ ವಾಹನದಿಂದುಂಟಾದ ಆಕಸ್ಮಿಕ ಘಟನೆಯಲ್ಲಿ 'x' ಎಂಬುವನು ಮರಣ ಹೊಂದುತ್ತಾನೆ. 'x' ನ ಮಡದಿ ಸರಕಾರದ ವಿರುದ್ಧ ನಷ್ಟ ಪರಿಹಾರ ಕೇಳಿ ದಾವೆ ಹೂಡುತ್ತಾಳೆ. ಅವಳು ಗೆಲ್ಲುವಳೇ ? ತೀರ್ಮಾನಿಸಿ.

---

StudentBounty.com
www.StudentBounty.com